**ರಾಯರು:** ಏನ್ರೀ ಗುಂಡ ಟೀವಿ ರೇಡಿಯೊಗಿಂತ ಉತ್ತಮ ಅಂತ ಹೇಗೆ ಹೇಳ್ತೀರಾ?
**ಗುಂಡ:** ಹೌದು ಸಾರ್! ನೀವೇನು ಅನರ್ಥ ಮಾತನಾಡಿರ್ತೀರೋ ಅದನ್ನು ನೀವೇ ಟೀವಿಯಲ್ಲಿ ನೋಡಬಹುದು.

***

**ಹೆಂಡತಿ:** 'ನೂರು ವರ್ಷಗಳ ಕಾಲ ಬದುಕುವುದು ಹೇಗೆ?' ಎಂಬ ಪುಸ್ತಕ ಇತ್ತಲ್ಲಾ, ಎಲ್ಲಿ ಅದು?
**ಗುಂಡ:** ಅದನ್ನು ಸುಟ್ಟು ಹಾಕಿಬಿಟ್ಟೆ. ಯಾಕೆಂದರೆ ನಾನು ಅಷ್ಟು ವರ್ಷಗಳ ಕಾಲ ಬದುಕುವುದಿಲ್ಲ ಎಂಬುದು ನನಗೆ ಖಾತ್ರಿಯಾಗಿದೆ.

***

**ಟೀಚರ್:** ಲೋ ಗುಂಡ ಮಿಲ್ಟನ್ ಒಬ್ಬ ಮಹಾಕವಿ. ಅವನ ಬಗ್ಗೆ ನಿನಗೇನು ಗೊತ್ತಿದೆಯೋ ಅದನ್ನು ಹೇಳು.
**ಗುಂಡ:** ಮಿಸ್ ಅವನು ಮದುವೆಯಾದಾಗ ಪ್ಯಾರಡೈಸ್ ಲಾಸ್ ಎಂಬ ಪುಸ್ತಕ ಬರೆದ. ಅವನ ಹೆಂಡತಿ ಸತ್ತಾಗ ಪ್ಯಾರಡೈಸ್ ರೀಗೈನ್ಡ್ ಎಂಬ ಪುಸ್ತಕ ಬರೆದ.

***

**ಟೀಚರ್:** ಗುಂಡ, ಸೂರ್ಯ ಪೂರ್ವದಲ್ಲಿ ಹುಟ್ಟುವನೋ ಪಶ್ಚಿಮದಲ್ಲಿ ಹುಟ್ಟುವನೋ?
**ಗುಂಡ:** ಎರಡೂ ಅಲ್ಲ. ಆಕಾಶದಲ್ಲಿ ಮಿಸ್.

**ರಾಣಿ:** ನನ್ನ ಗಂಡ ನನ್ನನ್ನು ಈ ಪ್ರಪಂಚದಲ್ಲಿಯೇ ಅತ್ಯಂತ ಸುಂದರವಾದ ಹೆಣ್ಣು ಎಂದು ಹೇಳುತ್ತಾರೆ.
**ಗುಂಡ:** ಸಾಕ್ ಸುಮ್ಮನೆ ಇರು. ಸುಳ್ಳು ಹೇಳಬೇಡ.
**ರಾಣಿ:** ಸುಳ್ಳು ಅಂತ ನೀನು ಹೇಗೆ ಹೇಳ್ತೀಯಾ?
**ಗುಂಡ:** ಏಕೆಂದರೆ ನಿನ್ನ ಗಂಡನಿಗೆ ದೃಷ್ಟಿ ದೋಷವಿದೆ.

**ಟೀಚರ್:** ಏನೋ ಗುಂಡ, ನೀನು ಕನ್ನಡದಲ್ಲಿ ತುಂಬಾ ವೀಕ್ ಇದ್ದಂಗಿದ್ದೀಯಲ್ಲೋ.
**ಗುಂಡ:** ಯಾಕೆ ಮೇಡಂ.
**ಟೀಚರ್:** 10 ಸಲ ಬರೆದುಕೊಂಡು ಬಾ ಅಂತ ಹೇಳಿದ್ದೆ. ಆದರೆ ನೀನು 3 ಸಲ ಮಾತ್ರ ಬರೆದುಕೊಂಡು ಬಂದಿದ್ದೀಯಾ.
**ಗುಂಡ:** ಅದಾ... ನಾನು ಗಣಿತದಲ್ಲಿ ತುಂಬಾ ವೀಕ್ ಇದೀನಿ ಮಿಸ್.

**ಹೆಂಡತಿ:** ಖಂಡಿತವಾಗಿ. ಯಾಕೆಂದರೆ ನನ್ನ ಬುದ್ಧಿ ಇನ್ನೂ ನನ್ನ ಬಳಿಯೇ ಇದೆ.

***

**ಗುಂಡ:** ನೀನು ನನ್ನನ್ನು ಮದುವೆಯಾಗದಿದ್ದರೆ ನಾನು ಗುಂಡು ಹಾರಿಸಿಕೊಂಡು ಸಾಯುತ್ತೇನೆ.
**ಪ್ರೇಯಸಿ:** ಅಯ್ಯೋ ಬೇಡ.
**ಗುಂಡ:** ಯಾಕೆ ಬೇಡ?
**ಪ್ರೇಯಸಿ:** ಯಾಕೆಂದರೆ ನನಗೆ ರಕ್ತ ಕಂಡರೆ ತುಂಬಾ ಹೆದರಿಕೆ.

***

**ಸುಂದರಿ:** ನಮ್ಮ ಮನೆಯ ಕಿಟಕಿಗಳ ಪರದೆಯೆಲ್ಲ ಇನ್ನು ಮುಂದೆ ಸದಾಕಾಲ ತೆಗೆದಿರುತ್ತದೆ.
**ಸುನಂದಾ:** ಯಾಕೆ?
**ಸುಂದರಿ:** ನಾನು ಮದುವೆಯಾಗ್ತಿದ್ದೀನಿ. ಮನೆ ಕಾವಲಿಗೆ?

***

**ಗುಂಡ:** ನಿನಗೆ ಸ್ಕೂಟರ್, ಕಾರು, ಮನೆ ಎಲ್ಲ ಕೊಡಿಸುತ್ತೇನೆ ಎಂದು ಹೇಳಿದರೂ ನೀನು ನನ್ನನ್ನು ಮದುವೆಯಾಗಲು ಯಾಕೆ ಒಪ್ಪುತ್ತಿಲ್ಲ?
**ಪ್ರೇಯಸಿ:** ಇನ್ನೊಬ್ಬ ಹುಡುಗ ನನಗೆ ಇವುಗಳ ಜೊತೆಗೆ ಒಂದು ಲಕ್ಷ ಕೊಡ್ತೀನಿ ಅಂತ ಹೇಳ್ತಿದ್ದಾನೆ.

***

**ಗುಂಡ:** ನೀನು ಹೀಗೇ ಹಟ ಮಾಡುತ್ತಿದ್ದರೆ ನಿನ್ನ ರೇಷ್ಮೆ ಸೀರೆಯಲ್ಲೇ ನೇಣು ಹಾಕಿಕೊಂಡು ಸತ್ತುಹೋಗುತ್ತೇನೆ.
**ಹೆಂಡತಿ:** ಅಯ್ಯೋ ಹಾಗೆಲ್ಲ ಮಾಡಬೇಡಿ.
**ಗುಂಡ:** ಹಾಂ... ಹಾಗೆ ಬಾ ದಾರಿಗೆ. ಈಗ ಬುದ್ಧಿ ಬಂತಾ?
**ಹೆಂಡತಿ:** ಎಂತದು ಇಲ್ಲ. ಈ ಸೀರೆ ನನ್ನ ಫೇವರಿಟ್. ಅದಕ್ಕೆ ನಿಮ್ಮನ್ನ ತಡೆದೆ. ಬೇಕಾದರೆ ಬೇರೆ ಸೀರೆ ಕೊಡ್ತೀನಿ.

**ರಾಯರು:** ಗುಂಡ ನಿಮಗೆ ಮದುವೆಯಲ್ಲಿ ನಂಬಿಕೆಯೋ ಅಥವಾ ಲಾಟರಿಯಲ್ಲಿ ನಂಬಿಕೆಯೋ?
**ಗುಂಡ:** ಲಾಟರಿಯಲ್ಲಿ ಸಾರ್.
**ರಾಯರು:** ಯಾಕೆ?
**ಗುಂಡ:** ಯಾಕೆಂದರೆ ಲಾಟರಿಯಲ್ಲಿ ಒಂದೆರಡು ಅವಕಾಶಾನಾದ್ರೂ ಇರುತ್ತದೆ. ಆದರೆ ಮದುವೆಯಲ್ಲಿ ಅವಕಾಶ ತುಂಬಾ ಕಡಿಮೆ.

**ಗುಂಡ:** ನೀನು ನನ್ನನ್ನು ನೋಡಿದ ಕೂಡಲೇ ಮದುವೆಯಾಗಲು ಹೇಗೆ ಒಪ್ಪಿಕೊಂಡೆ?
**ಹೆಂಡತಿ:** ಏನಿಲ್ಲ ನಿಮ್ಮ ಮನೆಯವರೆಲ್ಲ ಹೋಟೆಲ್ ನಡೆಸುತ್ತಿದ್ದಾರಲ್ವಾ? ಹೀಗಾಗಿ, ನಿಮಗೂ ಚೆನ್ನಾಗಿ ಅಡುಗೆ ಮಾಡಲು ಬರುತ್ತದೆಂದು ಯೋಚಿಸಿ ಮದುವೆಗೆ ಒಪ್ಪಿಕೊಂಡೆ. ನನಗೆ ಅಡುಗೆ ಮಾಡೋದಂದ್ರೆ ಅಲರ್ಜಿ.

***

**ಸೆಕ್ರೆಟರಿ:** ಸಾರ್ ನಿಮ್ಮ ಹೆಂಡತಿ ಫೋನ್ ಮಾಡಿದ್ದಾರೆ. ನಿಮಗೆ ಮುತ್ತು ಕೊಡಬೇಕಂತೆ ಬನ್ನಿ ಬೇಗ.
**ಬಾಸ್:** ರೀ... ಈಗ ನನಗೆ ಟೈಮಿಲ್ಲ. ಅದನ್ನು ನೀವೆ ತಗೊಂಡು ಆಮೇಲೆ ನನಗೆ ಕೊಡಿ.

***

**ಗುಂಡ:** ಸಾರ್ ಒಂದು ವಾರ ನಾನು ರಜಾ ಹೋಗ್ತಾ ಇದೀನಿ.
**ಬಾಸ್:** ಏನ್ರೀ ನೀವು. ನಾನೂ ಒಂದು ತಿಂಗಳು ಊರಿನಲ್ಲಿರಲಿಲ್ಲ. ಅದು ಸಾಕಾಗಲಿಲ್ಲವಾ ನಿಮಗೆ?

***

**ತಂದೆ:** ಮಗನೇ ನೀನು ಸದಾಕಾಲ ಸತ್ಯವನ್ನೇ ನುಡಿಯುತ್ತಿದ್ದರೆ ಸತ್ಯಹರಿಶ್ಚಂದ್ರನಂತೆ ಆಗುತ್ತೀಯಾ.
**ಮಗ:** ಯಾವಾಗಲೂ ದುಡ್ಡು ಕೊಡುತ್ತಿದ್ದರೆ ದಾನಶೂರ ಕರ್ಣನಂತೆಯೂ ಆಗುತ್ತೀನಿ ಅಪ್ಪ.

***

**ಟೀಚರ್:** ನಿನ್ನೆ ಯಾಕೋ ಶಾಲೆಗೆ ಬಂದಿಲ್ಲ?
**ಗುಂಡ:** ಏನಿಲ್ಲ ಟೀಚರ್ ಮೊನ್ನೆ ನಿಮ್ಮನ್ನು ಡಾಕ್ಟರ್ ಶಾಪಿನಲ್ಲಿ ನೋಡಿದೆ. ಹುಷಾರಿಲ್ಲದೆ ನೀವು ಶಾಲೆಗೆ ಬರುತ್ತೀರೋ ಇಲ್ಲವೋ ಅಂತ ಅನುಮಾನದಿಂದ ನಾನೂ ಬರಲಿಲ್ಲ.

***

**ಟೀಚರ್:** ಲೋ ಗುಂಡ ನೀನೇನು ಈ ತರಗತಿಯ ಉಪಾಧ್ಯಾಯನಾ?
**ಗುಂಡ:** ಇಲ್ಲ ಸಾರ್.
**ಟೀಚರ್:** ಮತ್ತೆ ಮೂರ್ಖನ ತರಹ ಯಾಕೆ ಮಾತಾಡ್ತಾ ಇದೀಯಾ?

***

**ಗುಂಡ:** ನನ್ನ ಮಗನಿಗಿರುವ ಬುದ್ಧಿವಂತಿಕೆಯೆಲ್ಲಾ ನನ್ನಿಂದಲೇ ಅವನಿಗೆ ಬಂದದ್ದು ಅಂತ ನಿನಗೆ ಅನಿಸುವುದಿಲ್ಲವೇ?

**ಗೆಳೆಯ:** ನೀನು ಎಂದಾದರೂ ಭೂತವನ್ನು ನೋಡಿದ್ದೀಯಾ?
**ಗುಂಡ:** ನೋಡಿರೋದೇನು? 40 ವರ್ಷಗಳಿಂದ ಅದರ ಜೊತೆಯಲ್ಲೇ ಸಂಸಾರ ಮಾಡ್ತಿದ್ದೇನೆ.

***

**ವೈದ್ಯ:** ನಿಮ್ಮ ಎಕ್ಸ್ ರೇನಲ್ಲಿ ನಿಮ್ಮ ಕಾಲಿನ ಮೂಳೆ ಮುರಿದಿರುವುದು ಗೊತ್ತಾಗಿದೆ.
**ಗುಂಡ:** ಸದ್ಯ ಗೆದ್ದೆ ಡಾಕ್ಟ್ರೇ! ಮೂಳೆ ಮುರಿದಿರುವುದು ಎಕ್ಸ್ ರೇನಲ್ಲಿ ತಾನೇ? ನನ್ನ ಕಾಲಿನಲ್ಲಿ ಅಲ್ವಲ್ಲ.

***

**ಗುರುಗಳು:** ಪೊಲೀಸರಿಗೂ ಶಿಕ್ಷಕರಿಗೂ ಇರುವ ವ್ಯತ್ಯಾಸವೇನು?
**ಗುಂಡ:** ಪೊಲೀಸರು ಒದ್ದು ಒಳಗೆ ಹಾಕ್ತಾರೆ. ಶಿಕ್ಷಕರು ಒಡಿದು ಹೊರಗೆ ಕಳಿಸುತ್ತಾರೆ.

**ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು**